**ಎರಡನೆಯ ಕಿರು ಪರೀಕ್ಷೆ**

**(ಕಲಿಕಾ ಫಲ ಆಧರಿತ)**

**ಸಮಯ: 45 ನಿ.** **9ನೇ ತರಗತಿ ಕನ್ನಡ** **ಅಂಕಗಳು –20**

---

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಬರೆಯಿರಿ.** **1*2=2**

**1. ಅಕ್ಕಿಯ ಮೇಲಾಸೆ …………………**

ಅ) ನೆಂಟರ ಮೇಲೆ ಪ್ರೀತಿ ಆ) ದೋಸೆ ಮೇಲೆ ದೋಸೆ ಇ) ದೀಪವಿಟ್ಟ ಹಾಗೆ ಈ) ಪೂಜಾರಿ ಕೊಡ

**2. ಕೇರಳದಲ್ಲಿ ನಡೆಯುವ ಅತಿದೊಡ್ಡ ಹಬ್ಬ ;**

ಅ) ಪೊಂಗಲ್ ಆ) ದೀಪಾವಳಿ ಇ) ದಸರಾ ಈ) ಓಣಂ

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **1*2=2**

3. ಉಪ್ಪಿನ ಸತ್ಯಾಗ್ರಹ ಎಂದರೇನು ?

4. ಯೋಧ ಮತ್ತು ಹೆಂಗಸು ಪದ್ಯದಲ್ಲಿ ಬರುವ ಯೋಧನ ಹೆಸರೇನು?

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ..** **2*3=6**

5. ನೀಡಿರುವ ಪದಗಳನ್ನು ಅಕರಾದಿಯಾಗಿ ಜೋಡಿಸಿ ಬರೆಯಿರಿ.

ಅಮೃತ, ಸುಧೆ, ನಾಣ್ಯ, ಆಕಾಶ, ಒಮ್ಮೆ, ರೈತ, ಹದ್ದು, ನೋಟ.

**6. ಕೆಳಗಿನ ಪದಗಳ ಸಮನಾರ್ಥಕ ಪದಗಳನ್ನು ಬರೆಯಿರಿ**

ಆಕಾಶ, ಸೂರ್ಯ, ಭೂಮಿ, ಗಜ.

**7. ಈ ಕೆಳಗಿನ ಜನಪದ ಕಲೆಗಳಲ್ಲಿ ಒಂದರ ವೇಷಭೂಷಣಗಳ ಬಗ್ಗೆ ಬರೆಯಿರಿ.**

ವೀರಗಾಸೆ, ಯಕ್ಷಗಾನ

**ಈ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **3*2=6**

**8. ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ**

1. ಉಪ್ಪು ತಿಂದವನು ನೀರು ಕುಡಿಯಲೇ ಬೇಕು. 2. ಯಾರದೋ ದುಡ್ಡು, ಯಲ್ಲಮ್ಮನ ಜಾತ್ರೆ.

**9. ಈ ಕೆಳಗಿನ ಚಿತ್ರಗಳನ್ನು ಗಮನಿಸಿ ಕಥೆಯೊಂದನ್ನು ರಚಿಸಿ.**



**ಉ) ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿ.** **4*1=4**

10. ಅ) ನಿಮ್ಮ ಒಂದು ದಿನದ ದಿನಚರಿಯನ್ನು ಬರೆಯಿರಿ

**ಆ) ಈ ಕೆಳಗಿನ ವಚನದಲ್ಲಿ ಅಡಿಗೆರೆ ಎಳೆದ ಪದಗಳ ಅರ್ಥ ಬರೆದು, ವಚನದ ಸ್ವಾರಸ್ಯ ಬರೆಯಿರಿ.**

ಮನೆಯೊಳಗೆ **ಮನೆಯೊಡೆಯ**ನಿದ್ದಾನೋ ಇಲ್ಲವೋ
**ಹೊಸ್ತಿಲಲ್ಲಿ** ಹುಲ್ಲು ಹುಟ್ಟಿ, ಮನೆಯೊಳಗೆ **ರಜ**ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
**ತನು**ವಿನೊಳಗೆ **ಹುಸಿ** ತುಂಬಿ, ಮನದೊಳಗೆ **ವಿಷಯ** ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ